

MAG(2)PRB/CR/165/2022-23 Title code: KARKAN27951

# ಮುಂಜಾನೆ ವಾರ್ತೆ

ಇ–ಪೇಪರ್: www.munjanevarthe.com EDITOR: H.L.AMARANATH

MUNJANE VARTHE ಸಂಪಾದಕ: ಹೆಚ್.ಎಲ್ ಅಮರನಾಥ್ ಕನ್ನಡ ದಿನಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ
9663122276
www.munjanevarthe.com

VOLUME : 2 ISSUE: 124 ಸಂಪುಟ: 02 ಸಂಚಿಕೆ: 124 ಪುಟಗಳು: 04 munjanevarthe 17 MONDAY JUNE 2024 17 ಸೋಮವಾರ ಜೂನ್ 2024 ₹ 2

ರಿಪ್ಪನ್‌ಪೇಟೆಗೆ ಶ್ರೀರಾಮಸೇನೆಯ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಭೇಟಿ....! ವಿವರಪುಟ 02

ಸರ್ಕಾರಿ ಪ್ರೌಢಶಾಲೆ ವತಿಯಿಂದ ಪರಿಸರ ದಿನಾಚರಣೆ ವಿವರಪುಟ 03

ಸಾಗರ ಹೊಸನಗರ ತಾಲ್ಲೂಕು ಉಪ್ಪಾರ ಸಮಾಜದ ಸಂಘಟನಾ ಸಂಪರ್ಕ ಸಭೆ ವಿವರಪುಟ 04

# ಮುಂದಿನ 5 ವರ್ಷಗಳಲ್ಲಿ 50 ಲಕ್ಷ ಉದ್ಯೋಗ ಸೃಷ್ಟಿ

ನವದೆಹಲಿ: ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಮೂಲಗಳ ಪ್ರಕಾರ, ಭಾರತ ಸರ್ಕಾರವು ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲಿ ಎಲೆಕ್ಟ್ರಾನಿಕ್ ಉತ್ಪಾದನೆಯನ್ನು ದ್ವಿಗುಣಗೊಳಿಸುವ ಸಾಧ್ಯತೆಯಿದೆ, ಇದು ಭಾರಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ.

ಮುಂದಿನ 5 ವರ್ಷಗಳಲ್ಲಿ ಭಾರತದ ಎಲೆಕ್ಟ್ರಾನಿಕ್ ಉತ್ಪಾದನೆಯು ಸುಮಾರು 250 ಬಿಲಿಯನ್ ಡಾಲರ್ ತಲುಪುವ ಸಾಧ್ಯತೆಯಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ. ದೇಶದ ಪ್ರಸ್ತುತ ಎಲೆಕ್ಟ್ರಾನಿಕ್ ರಫ್ತು 125–130 ಬಿಲಿಯನ್ ಡಾಲರ್ ಆಗಿದೆ.

ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವ ಉದ್ದೇಶದಿಂದ, ಭಾರತ ಸರ್ಕಾರವು ಎಲೆಕ್ಟ್ರಾನಿಕ್ ಉತ್ಪಾದನಾ ಕ್ಷೇತ್ರದಲ್ಲಿ ಉದ್ಯೋಗಗಳನ್ನು ಸೃಷ್ಟಿಸಲು ಯೋಜಿಸುತ್ತಿದೆ. ಪ್ರಸ್ತುತ, ಎಲೆಕ್ಟ್ರಾನಿಕ್ ಉತ್ಪಾದನೆಯಲ್ಲಿ 25 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ.




# ಗ್ಯಾರಂಟಿ ಸರ್ಕಾರದಿಂದ ಜನರ ಜೇಬಿಗೆ ಕತ್ತರಿ

ಬೆಂಗಳೂರು: ಲೋಕಸಭೆ ಚುನಾವಣೆ ಮುಗಿದ ಬೆನ್ನಲ್ಲೇ ರಾಜ್ಯ ಸರ್ಕಾರ ವಾಹನ ಸವಾರರ ಜೇಬಿಗೆ ಕತ್ತರಿ ಪ್ರಯೋಗ ಮಾಡಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ಮೇಲಿನ ತೆರಿಗೆಯನ್ನು ಹೆಚ್ಚಳ ಮಾಡಿದೆ. ಶನಿವಾರದಿಂದಲೇ ಅನ್ವಯವಾಗುವಂತೆ ರಾಜ್ಯಾದ್ಯಂತ ಪ್ರತಿ ಲೀಟರ್ ಪ್ರೆಟೋಲ್ ದರವನ್ನು 3 ರೂ. ಹಾಗೂ ಡೀಸೆಲ್ ದರನ್ನು 3 ರೂ. 50 ಪೈಸೆಗೆ ಹೆಚ್ಚಿಸಿ ಆದೇಶ ಹೊರಡಿಸಿದೆ.




ಇದರಿಂದ ಇನ್ನು ಮುಂದೆ ಪೆಟ್ರೋಲ್ ದರ ಲೀಟರ್‌ಗೆ 103 ರೂ.ಗೆ ಹಾಗೂ ಡೀಸೆಲ್ 91 ರೂ. 50 ಪೈಸೆ ಏರಿಕೆಯಾಗಿದೆ. ಈ ಹಿಂದೆಯೇ ಡೀಸೆಲ್ ಮತ್ತು ಪೆಟ್ರೋಲ್ ಮಾರಾಟ ತೆರಿಗೆ ದರವನ್ನು ಏರಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದಿತ್ತಾದರೂ ಲೋಕಸಭೆ ಚುನಾವಣೆ ಹಿನ್ನಲೆಯಲ್ಲಿ ತಡೆಹಿಡಿಯಲಾಗಿತ್ತು.

ವಿರೋಧ ಪಕ್ಷಗಳು ಇದನ್ನೇ ಅಸ್ತ್ರ ಮಾಡಿಕೊಂಡರೆ ಫಲಿತಾಂಶದಲ್ಲಿ ಹಿನ್ನಡೆಯಾಗಬಹುದೆಂಬ ಕಾರಣಕ್ಕೆ ಸರ್ಕಾರ ದರ ಹೆಚ್ಚಿಸುವ ದುಸ್ಸಾಹಸಕ್ಕೆ ಮುಂದಾಗಿರಲಿಲ್ಲ.

ಲೋಕಸಭೆ ಚುನಾವಣೆ ಮುಗಿದ ಬೆನ್ನಲ್ಲೇ ದರ ಹೆಚ್ಚಿಸುವ ಮೂಲಕ ವಾಹನ ಸವಾರರ ಜೇಬಿಗೆ ಕತ್ತರಿ ಬಿದ್ದಂತಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಬೇಕಾದ ಅಗತ್ಯ ಇರುವ ಕಾರಣ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ ಎಂದು ತಿಳಿದುಂದಿದೆ.

## ಯಾರದ್ದೋ ಯಾರಿಗೋ ದಾನ ಮಾಡಿದ ಹಾಗಾಯ್ತು..!

ಮಂಡ್ಯ : ಬೆಲೆ ಏರಿಕೆ ಮಾಡಿದ ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ಜನರೇ ದಂಗೆ ಏಳಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದಿಚುಂಚನಗಿರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಲೆ ಏರಿಕೆ ವಿರುದ್ಧ ಬಿಜೆಪಿ ಜೆಡಿಎಸ್ ಪಕ್ಷಗಳು ಪ್ರತಿಭಟನೆ ಮಾಡುವುದಕ್ಕಿಂತ ಸರ್ಕಾರದ ದುರಾಡಳಿತದ ವಿರುದ್ಧ ಜನ ದಂಗೆ ಎದ್ದರೆ ಸರ್ಕಾರಕ್ಕೆ ಬುದ್ದಿ ಬರಬಹುದು. ಗ್ಯಾರಂಟಿ ಮುಂದುವರಿಸಲು ಬೆಲೆ ಏರಿಕೆ ಮಾಡಿದ್ದಾಗಿ ಕಾಂಗ್ರೆಸ್ ಸಚಿವರೇ ಒಪ್ಪಿಕೊಂಡಿ ದ್ದಾರೆ ಎಂದು ಹೇಳಿದರು. ಯಾರದ್ದೋ ಯಾರಿಗೋ ದಾನ ಮಾಡ್ತಾರೆ ಎಂಬ ಗಾದೆ ಇದೆಯ ಹಾಗೇ ಆಯ್ತು ಈ ಸರ್ಕಾರದ ಕತೆ ಎಂದು ವ್ಯಂಗ್ಯವಾಡಿದ ಕುಮಾರಸ್ವಾಮಿ, ಜನರಿಂದಲೇ ದುಡ್ಡು ವಸೂಲಿ ಮಾಡಿ, ಜನರಿಗೆ ನೀಡಲು ಸರ್ಕಾರ ಮುಂದಾಗಿದೆ ಎಂದು ಟೀಕಿಸಿದರು. ಆದಿಚುಂಚನಗಿರಿಯಲ್ಲಿ ಕಾಲಭೈರವ ದೇವರ ದರ್ಶನ ಮಾಡಿದ ಕುಮಾರಸ್ವಾಮಿ ನಾಣು ಕಾಳಭೈರವನ ದರ್ಶನ ಮುಗಿಸಿ ಶ್ರೀಗಳ ಆಶೀರ್ವಾದ ಪಡೆದಿದ್ದೇನೆ. ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಸಿಗುವಂತೆ ದೇವರಲ್ಲಿ ಕೋರಿಕೊಂಡಿದ್ದೇನೆ. ಒಕ್ಕಲಿಗ ಸಮಾಜ ಹಾಗೂ ರಾಜ್ಯಕ್ಕೆ ಗೌರವ ತರುವಂತಹ ಕೆಲಸ ಮಾಡಲು ಶಕ್ತಿ ಕೊಡುವಂತೆ ದೇವರಲ್ಲಿ ಪ್ರಾರ್ಥನೆ ಮಾಡಿದ್ದೇನೆ ಎಂದರು. ಕೇಂದ್ರ ಸರ್ಕಾರದಲ್ಲಿ ಎರಡು ಕಠಿಣ ಇಲಾಖೆ ಜವಾಬ್ದಾರಿ ದೊರೆತಿದೆ. ರಾಜ್ಯಕ್ಕೆ ಉತ್ತಮ ಕೊಡುಗೆ ನೀಡುವ ಅವಕಾಶವೂ ಸಿಕ್ಕಿದೆ. ನೋಡೋಣ ಎಷ್ಟು ಸಾಧ್ಯವೋ ಅಷ್ಟು ಒಳ್ಳೆಯದು ಮಾಡುತ್ತೇನೆ ಎಂದು ಭರವಸೆ ನೀಡಿದರು.



## ಮೇಕೆದಾಟು ವಿಚಾರ, ಕೂತು ಮಾತನಾಡಿದರೆ ಪರಿಹಾರ



ರಾಮನಗರ : ರಾಜ್ಯ–ಕೇಂದ್ರ ಸರ್ಕಾರ, ತಮಿಳುನಾಡು, ಪಾಂಡಿಚೇರಿ ಸರ್ಕಾರಗಳು ಒಟ್ಟಿಗೆ ಕುಳಿತುಕೊಂಡು ಮಾತನಾಡಿದರೆ ಮೇಕೆದಾಟು ಯೋಜನೆ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಕೇಂದ್ರದ ನೂತನ ಜಲಶಕ್ತಿ ಸಚಿಚ ವಿ.ಸೋಮಣ್ಣ ಅವರು ಅಭಿಪ್ರಾಯಪಟ್ಟರು. ಸಚಿವರಾಗಿ ಮೊದಲ ಬಾರಿಗೆ ಕನಕಪುರದ ಶ್ರೀದೇಗುಲ ದೇವಸ್ಥಾನಕ್ಕೆ ಭೇಟಿ ನೀಡಿ ಮಾತನಾಡಿ, ಪ್ರಾಕೃತಿಕ ವಿಚಾರಗಳನ್ನು ಪರಸ್ಪರ ಕುಳಿತುಕೊಂಡು ಬಗೆಹರಿಸಬೇಕು. ಮೇಕೆದಾಟು ವಿಚಾರವೂ ಅದೇ ಮಾದರಿಯದ್ದು. ಹೀಗಾಗಿ ಕುಳಿತುಕೊಂಡು ಕಾನೂನಿನ ಚೌಕಟ್ಟಿನಲ್ಲಿ ಏನು ಸಾಧ್ಯವೋ ಆ ಬಗ್ಗೆ ಚರ್ಚಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಹೇಳಿದರು.

ಇನ್ನು ರಾಜ್ಯಕ್ಕೆ ಹೊಸ ರೈಲ್ವೆ ಯೋಜನೆ ಬಗ್ಗೆ ಮಾತಾನಾಡಿ, ಹೊಸ ಯೋಜನೆಗಳಿಗೆ ರಾಜ್ಯಗಳದ್ದೇ ಸಮಸ್ಯೆ ಇವೆ. ರಾಜ್ಯಗಳು ಜಾಗ ಕೊಡಬೇಕು, ಅದರ ಜೊತೆ ದುಡ್ಡು ಕೊಡಬೇಕು ಆಗ ಹೊಸ ಯೋಜನಗಳು ಆಗುತ್ತವೆ ಎಂದರು.

# ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂಪಾಯಿ ಅವ್ಯವಹಾರದ ವಿರುದ್ಧ ಜೂನ್ 28ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಬಿಜೆಪಿ (BJP)ತೀರ್ಮಾನಿಸಿದೆ. ಬೆಂಗಳೂರಿನಲ್ಲಿ ರಾಜ್ಯ ಬಿಜೆಪಿ ಕಚೇರಿಯಲ್ಲಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಯಿತು. ಎಸ್‌ಟಿ ಮುಖಂಡರ ಸಭೆಯಲ್ಲಿ ರಾಜ್ಯಾದ್ಯಂತ ಪ್ರತಿಭಟನೆಗೆ ನಿರ್ಧಾರ ಕೈಗೊಳ್ಳಲಾಯಿತು. ಇದೇ ವೇಳೆ, ಶ್ರೀರಾಮುಲು ಹಾಗೂ ಜನಾರ್ದನ ರೆಡ್ಡಿ ಸುದೀರ್ಘ ಅವಧಿಯ ನಂತರ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣ ಉಲ್ಲೇಖಿಸಿ ಮಾತನಾಡಿದ ಶ್ರೀರಾಮುಲು, ಸಿದ್ದರಾಮಯ್ಯ ಸರ್ಕಾರ ಎಸ್‌ಸಿ, ಎಸ್‌ಟಿಗೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದರು. ಶಿಕ್ಷಣ, ಮನೆ, ಮೂಲ ಸೌಕರ್ಯ ಕೊಡಿಸುವ ಕೆಲಸ ಮಾಡಬೇಕು. ಅದಕ್ಕಾಗಿ ಪ್ರತಿ ಇಲಾಖೆ ಶೇಕಡಾ 24ರಷ್ಟು ಹಣ ಮೀಸಲಿ ಡುತ್ತೆ ಸಿದ್ದರಾಮಯ್ಯ ಸರ್ಕಾರ ಕಳೆದ ವರ್ಷ 11,000 ಕೋಟಿ ರೂ. ಬಳಸಿದೆ. ಈ ವರ್ಷ 14 ಸಾವಿರ ಕೋಟಿ ಹಣವನ್ನು ದುರ್ಬಳಕೆ ಮಾಡಿದೆ. ಎಸ್‌ಸಿ, ಎಸ್‌ಟಿಗೆ ಮೀಸಲಿಟ್ಟಿದ್ದ 25,000 ಕೋಟಿ ರೂ. ದುರ್ಬಳಕೆಯಾಗಿದೆ ಎಂದು ರಾಮುಲು ಆರೋಪಿಸಿದರು.




## ಗೃಹಲಕ್ಷ್ಮಿ 11ನೇ ಕಂತಿನ ಹಣ ಈ ದಿನ ಬಿಡುಗಡೆ..!

ಬೆಂಗಳೂರು:– ಮಹಿಳೆಯರಿಗೆ ಗುಡ್ ನ್ಯೂಸ್ ಸಿಕ್ಕಿದ್ದು, ಖಾತೆಗೆ 11 ನೇ ಕಂತಿನ ಗೃಹಲಕ್ಷ್ಮಿ ಹಣ ಬಂದಿದೆ ಎನ್ನಲಾಗಿದೆ. ಈಗಾಗಲೇ 10 ಕಂತುಗಳು ಜಮಾ ಆಗಿದ್ದು, 11ನೇ ಕಂತು ಮತ್ತು ನಂತರದ ಕಂತುಗಳು ಎರಡು ಮೂರು ದಿನಗಳಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ ಎಂದು ವರದಿಯಾಗಿದೆ. ರಾಜ್ಯ ಸರ್ಕಾರವು ಅರ್ಹ ಸ್ವೀಕೃತದಾರರ ಖಾತೆಗಳಿಗೆ ನೇರವಾಗಿ 10 ಕಂತುಗಳನ್ನು ಯಶಸ್ವಿಯಾಗಿ ವರ್ಗಾಯಿಸಿದ್ದರೂ, ಅಪೂರ್ಣ KYC ಅಥವಾ ಸಾಕಷ್ಟು ದಾಖಲಾತಿಗಳಂತಹ ಸಮಸ್ಯೆಗಳಿಂದಾಗಿ ಕೆಲವು ಮಹಿಳೆಯರು ಯೋಜನೆಯ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ. ಹೆಚ್ಚುವರಿಯಾಗಿ, ಕೆಲವು ಫಲಾನುಭವಿಗಳು ಗೃಹಲಕ್ಷ್ಮಿ ಅಡಿಯಲ್ಲಿ ತಮ್ಮ ಹಿಂದಿನ ಕಂತುಗಳ ವಿತರಣೆಗಾಗಿ ಇನ್ನೂ ಕಾಯುತ್ತಿದ್ದಾರೆ. ಗೃಹಲಕ್ಷ್ಮಿ 11 ನೇ ಕಂತಿನ ಹಣ ಸರಕಾರದಿಂದ ಬಿಡುಗಡೆ ಯಾಗಲಿದ್ದು ಮೊದಲು ಉಡುಪಿ ಹಾಗೂ ಚಿಕ್ಕಮಗಳೂರು ಮತ್ತು ಹಾಸನ ಮತ್ತು ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಚಾಮರಾಜನಗರ, ಬೆಂಗಳೂರು ಗ್ರಾಮಂತರ, ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ ಇಷ್ಟು ಜಿಲ್ಲೆಗಳಿಗೆ ಮೊದಲು ಗೃಹಲಕ್ಷ್ಮಿ ಹಣವು ಬಿಡುಗಡೆಯಾಗಲಿದೆ.




## ರಾಜ್ಯದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರೂ ಏರಿಕೆಯಾಗಿಲ್ಲ ಜಲಾಶಯಗಳ ನೀರಿನ ಮಟ್ಟ

ಬೆಂಗಳೂರು: ರಾಜ್ಯದಲ್ಲಿ ನೈರುತ್ಯ ಮುಂಗಾರು ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರೂ ರಾಜ್ಯದ ಪ್ರಮುಖ ಜಲಾಶಯಗಳ ನೀರಿನ ಸಂಗ್ರಹ ಮಾತ್ರ ಶೇ.21ರಷ್ಟಿದೆ. ನಾರಾಯಣಪುರ ಹಾಗೂ ವಾಣಿವಿಲಾಸ ಸಾಗರ ಜಲಾಶಯ ಹೊರತುಪಡಿಸಿದರೆ, ಉಳಿದ ಯಾವ ಜಲಾಶಯದಲ್ಲೂ ಶೇ.50ಕ್ಕಿಂತ ಹೆಚ್ಚು ನೀರಿಲ್ಲ.

ಮೇ ತಿಂಗಳಲ್ಲಿ ಪೂರ್ವ ಮುಂಗಾರು ಮಳೆ ಹಾಗೂ ಕಳೆದ ಎರಡು ವಾರಗಳಿಂದ ಮುಂಗಾರು ಮಳೆ ರಾಜ್ಯದಲ್ಲಿ ವಾಡಿಕೆಗಿಂತ ಹೆಚ್ಚಾಗಿದೆ. ಇದರಿಂದ ಕೃಷಿ ಚಟುವಟಿಕೆ ಚುರುಕುಗೊಂಡಿದ್ದು, ಕುಡಿಯುವ ನೀರು ಹಾಗೂ ಜಾನುವಾರುಗಳ ಮೇವಿಗೆ ಪರಿಹಾರ ದೊರೆತಂತಾಗಿದೆ.

ಆದರೆ, ಜಲ ವಿದ್ಯುತ್ ಉತ್ಪಾದಿಸುವ ಹಾಗೂ ಕೃಷಿಗೆ ನೀರು ಪೂರೈಸುವ ಜಲಾಶಯಗಳಿಗೆ

ಪುಟ 2ಕ್ಕೆ

ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...
www.munjanevarthe.com
ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುಗುವುದು ಈಗ ಮತ್ತಷ್ಟು ಸುಲಭ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಸೋಮವಾರ 17 ಜೂನ್ 2024
MONDAY 17 June 2024

# ಬಾಬಾ ಸಾಹೇಬ್ ಅಂಬೇಡ್ಕರ್‌ರವರ 133ನೇ ಜಯಂತಿ



ಯಳಂದೂರು. ತಾಲ್ಲೂಕಿನ ವೈ. ಕೆ. ಮೋಳೆ ಗ್ರಾಮದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರ 133ನೇ ಜಯಂತಿಯನ್ನು ವಿಜೃಂಭಣೆ ಯಿಂದ ನಡೆಸಲಾಯಿತು..

ಗ್ರಾಮಕ್ಕೆ ಆಗಮಿಸಿದ ಗಣ್ಯರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು,ನಂತರ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ. ಆರ್. ಕೃಷ್ಣಮೂರ್ತಿ ರವರ ಅಧ್ಯಕ್ಷತೆಯಲ್ಲಿ ವೇದಿಕೆ ಕಾರ್ಯಕ್ರಮ ನಡೆಯಿತು. ಸಂವಿಧಾನ ಪೀಠಿಕೆ ಓದುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು.ಎಸ್. ಎಸ್. ಎಲ್. ಸಿ. ಹಾಗೂ ಪಿ. ಯು. ಸಿ. ಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ಗಳಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜ್ಞಾನ ಪ್ರಕಾಶ್ ಸ್ವಾಮೀಜಿ ರವರು ಮಾತನಾಡಿ ನಿಮಗೆ ಅಂಬೇಡ್ಕರ್ ರವರು ಬದುಕುವ ಹಕ್ಕು, ಆಸ್ತಿಯ ಹಕ್ಕು, ಮತದಾನದ ಹಕ್ಕು, ಶಿಕ್ಷಣ ಕೊಟ್ಟಂತಹ ಅಂಬೇಡ್ಕರ್ ಮಕ್ಕಳ ಮೇಲೆ ಅತ್ಯಾಚಾರವಾಗುತ್ತಿದೆ, ಅವರ ವಂಶಸ್ಥರ ಬಟ್ಟೆ ಬಿಚ್ಚುತ್ತಿದ್ದಾರೆ,

ಬೀದಿಯಲ್ಲಿ ಮಾನ ಕಳೆಯುತ್ತಿದ್ದಾರೆ,ನಾವು ಮಾತ್ರ ಜೈ ಭೀಮ್ ಜೈ ಭೀಮ್ ಎನ್ನುತ್ತಾ ಕುಳಿತಿದ್ದೀವಿ,ಯಾರ ಋಣದಿಂದ. ದೇಶದ ಪ್ರಧಾನಿ ಮಂತ್ರಿ, ರಾಷ್ಟ್ರಪತಿ, ಮುಖ್ಯಮಂತ್ರಿಯಾಗಿದ್ದಾರೆ ಅವರೆಲ್ಲಾ ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದ ಬದುಕುತ್ತಿದ್ದಾರೆ ಎಂದು ತಿಳಿಸಿದರು

ಅಹಿಂಸೆ ನಟ ಚೇತನ್ ಮಾತನಾಡಿ ಅಂಬೇಡ್ಕರ್ ಅವರ ಚಿಂತನೆಗಳನ್ನು ಯುವಕರು ಮೈಗೂಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಪರಿವರ್ತನೆ ತರಲು ಸಾಧ್ಯ, ಸಮಾನತೆ, ಸಾಮಾಜಿಕ ನ್ಯಾಯದ ತಳಹದಿಯಲ್ಲಿ ರೂಪಗೊಂಡಿರುವ ಹೊಸ ಭಾರತವನ್ನು ಧಾರ್ಮಿಕ ರಾಷ್ಟ್ರವಾಗಿಸುವ ವ್ಯವಸ್ಥೆ ವಿರುದ್ಧ ನಿರಂತರವಾಗಿ ಹೋರಾಡಬೇಕಿದೆ ಎಂದರು.

ಸಮಾಜದಲ್ಲಿನ ಶೋಷಣೆ, ಅಸಮಾನತೆ ವಿರುದ್ಧ ನಡೆದ ವೈಚಾರಿಕ ಹೋರಾಟಗಳು ಸದಾ ಪ್ರಸ್ತುತವಾಗಿವೆ.

ಸಮಾಜ ಸುಧಾರಕರ ವಿಚಾರಗಳು ನಡೆ ನುಡಿಯಲ್ಲಿ ಅನುಸರಣೆಯಾಗಬೇಕು, ಕಾನ್ಷಿರಾಮ್ ರವರ ಹೋರಾಟದ ಚಳುವಳಿಯ ಆದರ್ಶ ನಮಗೆ ಬೇಕಾಗಿದೆ ಎಂದರು.

ಕೋಲಾರದ ಎ ಎಸ್ ಎಸ್ ಕೆ ಅಧ್ಯಕ್ಷರಾದ ಸಂದೇಶ್ ರವರು ಮಾತನಾಡಿ ಅಂಬೇಡ್ಕರ್ ಜಯಂತಿಗಳು ಬರೀ ಆಚರಣೆ ಆಗಬಾರದು, ಆದರ್ಶ ವಾಗಬೇಕು ನಾನು ನನ್ನ ಹೋರಾಟದ ಕೆಲವು ಘಟನೆಗಳನ್ನು ನೆನಪಿಸಬೇಕೆಂದರೆ ಸುಮಾರು 150ಕ್ಕೂ ಹೆಚ್ಚು ಅಂತರ್ ಜಾತಿ ವಿವಾಹಗಳನ್ನು ಮಾಡುಸಿದ್ದೇನೆ ಹಾಗೂ 210ಕ್ಕೂ ಹೆಚ್ಚು ಹೋರಾಟಗಳನ್ನು ನಡೆಸಿದ್ದೇನೆ, ನಮ್ಮ ಸಮುದಾಯದ ಹೆಣ್ಣು ಮಕ್ಕಳಿಗೆ ಅವಮಾನ ಆಗುವ ಯಾವುದೇ ಕೆಲಸವನ್ನು ನಡೆಸಲು ನಾವು ಬಿಡುವುದಿಲ್ಲ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಪುಟ್ಟ ಮಗು ಸಂವಿಧಾನದ ಪೀಠಿಕೆಯನ್ನು ಓದಿದ್ದು ಬಹಳ ವಿಶೇಷತೆವಾಗಿತ್ತು, ವಿಧ್ಯಾರ್ಥಿಗಳು ಅಂಬೇಡ್ಕರ್‌ರವರ ಸಾಂಗ್‌ಗೆ ನೃತ್ಯ ಮಾಡುವ ಮೂಲಕ ಮನರಂಜನೆ ನೀಡಿದರು, ಕಾರ್ಯಕ್ರಮದಲ್ಲಿ ಉದ್ಯಮಿ ಸಿಗಡಿ ಲೋಕೇಶ್, ಮಧು ಹೊಲೇಯರ್, ಅಂಬಳೆ ನವೀನ್, ಕಿನಕಹಳ್ಳಿ ರಾಚಯ್ಯ,ವಿಶ್ವ,ರಾಕಿ, ಶಿವು, ಬುಲೆಟ್,ಪ್ರಸಾದ್,ಸಚಿನ್, ಅಭಿ ಹಾಗೂ ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸಂಘಸಂಸ್ಥೆಯ ಮುಖಂಡರು ಯಜಮಾನರು, ನಿವೃತ್ತ ನೌಕರರು, ಶಿಕ್ಷಕರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು ಗ್ರಾಮಸ್ಥರು ಹಾಗೂ ಸಾರ್ವಜನಿಕರು ಹಾಜರಿದ್ದರು.

## ಯೋಗ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಮಕ್ಕಳಿಗೆ ಸನ್ಮಾನ



ಸಾಗರ : ರಾಷ್ಟ್ರಮಟ್ಟದ ಯೋಗ ಒಲಂಪಿಯಾಡ್ ಸ್ಪರ್ಧೆಗೆ ಆಯ್ಕೆಯಾದ ಸಾಗರದ ಪ್ರಜ್ವಲ್, ಕೌಶಿಕ್, ಪರಿಚಿತ, ಅಂಕಿತ ಮತ್ತು ಗೌತಮ ನಮ್ಮ ತಾಲೂಕಿಗೆ ಮತ್ತು ಜಿಲ್ಲೆಗೆ ಹೆಸರು ತಂದಿದ್ದಾರೆ ಎಂದು ಉಪವಿಭಾಗಾಧಿಕಾರಿ ಆರ್. ಯತೀಶ್ ಹೇಳಿದರು. ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ರಾಜ್ಯ ಪ್ರತಿನಿಧಿಸುತ್ತಿರುವ ಅವರನ್ನು ಕಚೇರಿ ಸಭಾಂಗಣದಲ್ಲಿ ಅಭಿನಂದಿಸಿ ನಂತರ ಅವರು ಶುಭ ಹಾರೈಸಿದರು.

14 ಮತ್ತು 16 ವರ್ಷದ ಒಳಗಿನ ಈ ಮಕ್ಕಳ ಸಾಧನೆ ಬೇರೆಯವರಿಗೂ ಸ್ಪೂರ್ತಿ, ಇದರ ಹಿಂದೆ ಯೋಗ ಗುರು ವನಶ್ರೀ ಮಂಜಪ್ಪ ಮತ್ತು ಯೋಗ ಸಾಧಕಿ ಸಂಧ್ಯಾ ಕಾನುಗೋಡು ಅವರ ಪರಿಶ್ರಮವೂ ಇದೆ ಎಂದರು. ತಹಸೀಲ್ದಾರ್ ಚಂದ್ರಶೇಖರ್ ನಾಯಕ್, ಯೋಗ ಗುರು ಮತ್ತು ವನಶ್ರೀ ಶಾಲೆಯ ಮುಖ್ಯಸ್ಥರಾದ ವನಶ್ರೀ ಮಂಜಪ್ಪ, ಸಂಧ್ಯಾ ಕಾನುಗೋಡು ಮತ್ತಿತರರು ಇದ್ದರು...

## ರಿಪ್ಪನ್‌ಪೇಟೆಗೆ ಶ್ರೀರಾಮಸೇನೆಯ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಭೇಟಿ....!

ಹೊಸನಗರ : ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಅವರು ರಿಪ್ಪನ್ ಪೇಟೆಗೆ ಭೇಟಿ ನೀಡಿ. ಹಿಂದೂ ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಿದರು. ಖಾಸಗಿ ಕಾರ್ಯನಿಮಿತ್ತ ಕೊಪ್ಪಕ್ಕೆ ತೆರಳುವಾಗ ಪ್ರಮೋದ್ ಮುತಾಲಿಕ್ ರಿಪ್ಪನ್ ಪೇಟೆ ಯ ಹಾಲುಗುಡ್ಡೆಯ ಅಶೋಕ್ ಗೌಡ ಎಂಬುವರ ಮನೆಗೆ ಭೇಟಿ ನೀಡಿ. ಹಿಂದೂ ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಕಗ್ಗಲಿ ತಿಮ್ಮಪ್ಪ . ದೇವದಾಸ್ ಆರ್ ಆಚಾರ್. ರಾಮಚಂದ್ರ ಕೆರೆಹಳ್ಳಿ ಇತರರು ಹಾಜರಿದ್ದರು..



ಪುಟ 1ರಿಂದ ಮಾತ್ರ ಗಣನೀಯವಾಗಿ ಒಳ ಹರಿವು ಹೆಚ್ಚಾಗಿಲ್ಲ. ಮುಂಗಾರು ಮಳೆ ಆರಂಭ ಉತ್ತಮವಾಗಿದ್ದು, ಜಲಾಶಯಗಳ ಒಳಹರಿವು ಆರಂಭಗೊಂಡಿದ್ದರೂ ಸಾಕಷ್ಟು ಪ್ರಮಾಣದಲ್ಲಿ ಒಳ ಹರಿವು ಬರುತ್ತಿಲ್ಲ. ಕಳೆದ ವರ್ಷ ಮುಂಗಾರು ದುರ್ಬಲವಾಗಿತ್ತು, ಅಲ್ಲದೆ, ರಾಜ್ಯದಲ್ಲಿ ಬರದ ಕರಾಳ ಛಾಯೆ ಆವರಿಸಿ ಜನ–ಜಾನುವಾರುಗಳನ್ನು ಸಂಕಷ್ಟಕ್ಕೆ ದೂಡಿತ್ತು.

ಈ ಬಾರಿ ಮುಂಗಾರು ಉತ್ತಮವಾಗಿದ್ದರೂ ಈತನಕ ಜಲಾಶಯಗಳು ಭರ್ತಿಯಾಗುವ ಪ್ರಮಾಣಕ್ಕೆ ಅನುಗುಣವಾಗಿ ಒಳಹರಿವು ಇಲ್ಲದಿರುವುದು ಮತ್ತೊಂದು ಆತಂಕಕ್ಕೆ ಕಾರಣವಾಗಿದೆ. ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ರಾಜ್ಯದ 14 ಪ್ರಮುಖ ಜಲಾಶಯಗಳಲ್ಲಿ 187.46 ಟಿಎಂಸಿ ಅಡಿಯಷ್ಟು ನೀರಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 185.85 ಟಿಎಂಸಿ ಅಡಿಯಷ್ಟು ನೀರಿತ್ತು. ಕಳೆದ ವರ್ಷಕ್ಕಿಂತ ಎರಡು ಟಿಎಂಸಿಯಷ್ಟು ಮಾತ್ರ ನೀರು ಹೆಚ್ಚಿದೆಯಷ್ಟೇ.

ಜಲವಿದ್ಯುತ್ ಉತ್ಪಾದಿಸುವ ಲಿಂಗನಮಕ್ಕಿ ಜಲಾಶಯದಲ್ಲಿ ಶೇ.10ರಷ್ಟು, ಸೂಪಾ ಜಲಾಶಯದಲ್ಲಿ ಶೇ.22ರಷ್ಟು ಹಾಗೂ ವರಾಹಿ ಜಲಾಶಯದಲ್ಲಿ ಶೇ.11ರಷ್ಟು ಮಾತ್ರ ನೀರು ಸಂಗ್ರಹವಾಗಿದೆ. ಈ ಮೂರು ಜಲಾಶಯಗಳಿಗೆ ಒಟ್ಟಾರೆ 1300 ಕ್ಯುಸೆಕ್‌ನಷ್ಟು ಮಾತ್ರ ಒಳಹರಿವಿದೆ.

ಕೃಷ್ಣಾ ಕೊಳದ ಭದ್ರಾದಲ್ಲಿ ಶೇ.21, ತುಂಗಭದ್ರಾದಲ್ಲಿ ಕೇವಲ ಶೇ.6ರಷ್ಟು ಮಾತ್ರ ನೀರಿದೆ. ಘಟಪ್ರಭಾದಲ್ಲಿ ಶೇ.16, ಮಲಪ್ರಭಾದಲ್ಲಿ ಶೇ.17, ಆಲಮಟ್ಟಿಯಲ್ಲಿ ಶೇ.21, ನಾರಾಯಣಪುರದಲ್ಲಿ ಶೇ.63 ಹಾಗೂ ವಾಣಿ ವಿಲಾಸ ಸಾಗರದಲ್ಲಿ ಶೇ. 60ರಷ್ಟು ನೀರು ಸಂಗ್ರಹವಾಗಿದೆ. ಕೃಷ್ಣಾ ಕೊಳ್ಳದ ಆರು ಜಲಾಶಯಗಳಲ್ಲಿ 17 ಸಾವಿರ ಕ್ಯುಸೆಕ್‌ಸಗೂ ಹೆಚ್ಚಿನ ಒಳಹರಿವಿದೆ.

## ಬಿಇಡಿ ಪದವಿಯಲ್ಲಿ ಚಿನ್ನದ ಪದಕ ಪಡೆಯುವ ಮೂಲಕ ಉತ್ತಮ ಸಾಧನೆ

ಮದ್ದೂರು ತಾಲ್ಲೂಕಿನ ವಳಗೆರಹಳ್ಳಿ ಗ್ರಾಮದ ನವ್ಯರಾಜ್ ಅವರು ಆದಿ ಚುಂಚನಗಿರಿ ವಿಶ್ವ ವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ಬಿಇಡಿ ಪದವಿಯಲ್ಲಿ ಚಿನ್ನದ ಪದಕ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಆ ಮೂಲಕ ವಿದ್ಯಾರ್ಥಿ ಸಮುದಾಯಕ್ಕೆ ಸ್ಪೂರ್ತಿಯಾಗಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎಚ್. ಕಾಳೀರಯ್ಯ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕಿನ ವಳಗೆರಹಳ್ಳಿ ಗ್ರಾಮದಲ್ಲಿ ಸಂಕಲ್ಪ ಸಾಂಸ್ಕೃತಿಕ ಟ್ರಸ್ಟ್ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಬಿಇಡಿ ಪದವಿಯಲ್ಲಿ ಚಿನ್ನದ ಪದಕ ಪಡೆದ ನವ್ಯರಾಜ್ ಅವರ ಅಭಿನಂದನಾ ಹಾಗೂ ಬಿರುದು ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ನವ್ಯರಾಜ್ ಅವರನ್ನು ಅಭಿನಂದಿಸಿ, ವಿದ್ಯಾರ್ಥಿ ರತ್ನ ಬಿರುದನ್ನು ಪ್ರದಾನಿಸಿ ನಂತರ ಅವರು ಮಾತನಾಡಿದರು.

ಆದಿ ಚುಂಚನಗಿರಿ ವಿಶ್ವ ವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ಬಿಇಡಿ ಪದವಿಯಲ್ಲಿ ಚಿನ್ನದ ಪಕದ ಪಡೆದಿರುವುದು ಅವರ ಕಠಿಣ ಪರಿಶ್ರಮ ತಿಳಿಯುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಹಲವು ಅವಕಾಶಗಳಿದ್ದು ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗಳನ್ನು ಬರೆಯಲು ಸಿದ್ದರಾಗಬೇಕು.



*ಮದ್ದೂರು ತಾಲ್ಲೂಕಿನ ವಳಗೆರಹಳ್ಳಿ ಗ್ರಾಮದಲ್ಲಿ ಸಂಕಲ್ಪ ಸಾಂಸ್ಕೃತಿಕ ಟ್ರಸ್ಟ್ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಚಿನ್ನದ ಪದಕ ಪಡೆದ ನವ್ಯರಾಜ್ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ನವ್ಯರಾಜ್ ಅವರನ್ನು ಅಭಿನಂದಿಸಿ, ವಿದ್ಯಾರ್ಥಿ ರತ್ನ ಬಿರುದನ್ನು ಪ್ರದಾನಿಸಲಾಯಿತು. ಸಿ.ಎಚ್. ಕಾಳೀರಯ್ಯ, ವಿ.ಸಿ. ಉಮಾಶಂಕರ್, ಸಿ.ಕೆ. ಶಶಿಕಲಾ, ವಿ.ಎಚ್. ಶಿವಲಿಂಗಯ್ಯ, ಬಿ.ಎ. ಮಧುಕುಮಾರ, ಚಾಮನಹಳ್ಳಿ ಮಂಜು, ವಿ.ಕೆ. ಶ್ರೀನಿವಾಸ್, ಅಂಬರಹಳ್ಳಿ ಸ್ವಾಮಿ ಇದ್ದಾರೆ.*

ನವ್ಯರಾಜ್ ಅವರ ಸಾಧನೆಯನ್ನು ಇತರ ವಿದ್ಯಾರ್ಥಿಗಳು ಸ್ಪೂರ್ತಿಯಾಗಿ ಪರಿಗಣಿಸಿ ಮುಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಮನುಷ್ಯನ ಮುಖ್ಯ ಅವಶ್ಯಕತೆಗಳಲ್ಲಿ ವಿದ್ಯೆಯೂ ಒಂದು. ನಾವು ಸಂಪಾದಿಸಿದ ಹಣ ಕಳೆದುಹೋಗಬಹುದು. ನಾವು ಕಲಿತ ವಿದ್ಯೆಯನ್ನು ಮರೆಯಲು ಸಾಧ್ಯವಿಲ್ಲ. ಹಣ ಮತ್ತು ಇತರ ವಸ್ತುಗಳನ್ನು ಬಳಸಿದಷ್ಟು ಕಡಿಮೆಯಾಗುತ್ತವೆ, ಆದರೆ ವಿದ್ಯೆ ಬಳಸಿದಷ್ಟು ಇನ್ನಷ್ಟು ಜ್ಞಾನ ವೃದ್ದಿಯಾಗುತ್ತದೆ ಎಂದು ಶಿಕ್ಷಣ ಮಹತ್ವವನ್ನು ತಿಳಿಸಿದರು.

25 ವರ್ಷಕ್ಕೂ ಹೆಚ್ಚು ಕಾಲ ಸಾವಿರಾರು ಹೋರಾಟ ರೂಪಿಸಿದ ಕನ್ನಡಪರ ಹೋರಾಟಗಾರರಾದ ವಿ.ಸಿ. ಉಮಾಶಂಕರ್ ಅವರ ಪುತ್ರಿ ನವ್ಯರಾಜ್ ಅವರು ಮಾಡಿರುವ ಸಾಧನೆ ಇತರರಿಗೆ ಪ್ರೇರಣೆಯಾಗಲಿದೆ. ಕನ್ನಡಪರ ಹೋರಾಟಗಾರರ ಪುತ್ರಿಯೊಬ್ಬರು ಚಿನ್ನದ ಪದಕ ಪಡೆದಿರುವುದು ಹರ್ಷದಾಯಕ ವಿಚಾರ ಎಂದು ಶ್ಲಾಘಿಸಿದರು.

ಚಿನ್ನದ ಪದಕ ಪುರಸ್ಕೃತೆ ನವ್ಯರಾಜ್ ಅವರು ಅಭಿನಂದನೆ ಸ್ವೀಕರಿಸಿ ಮಾತನಾಡಿ, ನನ್ನ ಕಠಿಣ ಪರಿಶ್ರಮದಿಂದ ಬಿ.ಇಡಿ ಪದವಿಯಲ್ಲಿ ಚಿನ್ನದ ಪದಕಗಳಿಸಿದ್ದು, ನಾನು ಪದಕ ಪಡೆಯಲು ಚುಂಚನಗಿರಿ ಮಠದ ಗುರುವರ್ಯರ ಪಾತ್ರ ಅಪಾರವಾಗಿದೆ. ಮುಂದಿನ ದಿನಗಳಲ್ಲಿ ಇನಷ್ಟು ಸಾಧನೆ ಮಾಡಲು ಸ್ಪೂರ್ತಿ ಸಿಕ್ಕಿದೆ. ಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲನಂದನಾಥ ಸ್ವಾಮೀಜಿ, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಇಸ್ರೋ ವಿಜ್ಞಾನಿ ಡಾ. ಎ.ಎಸ್. ಕಿರಣ್ ಕುಮಾರ್ ಅವರ ಸಮ್ಮುಖದಲ್ಲಿ ಚಿನ್ನದ ಪದಕ ಪಡೆಯುವ ಮೂಲಕ ಜೀವನ ಸಾರ್ಥಕವಾಗಿದೆ ಎಂದು ಭಾವುಕರಾದರು.

ಮಾಜಿ ಸೈನಿಕ ವಿ.ಡಿ. ಶ್ರೀನಿವಾಸ್, ಸಂಕಲ್ಪ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಬಿ.ಎ. ಮಧುಕುಮಾರ, ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಚಾಮನಹಳ್ಳಿ ಮಂಜು, ಎಂಪಿಸಿಎಸ್ ನಿರ್ದೇಶಕ ವಿ.ಕೆ. ಶ್ರೀನಿವಾಸ್, ಗಾಯಕ ಅಂಬರಹಳ್ಳಿ ಸ್ವಾಮಿ, ಮುಖಂಡರಾದ ಎಂ. ವೀರಪ್ಪ, ಯರಗನಹಳ್ಳಿ ಮಹಾಲಿಂಗು, ಕೋಟಿ ಕೃಷ್ಣ, ಸೋಂಪುರ ಉಮೇಶ್, ಸಾಗರ್, ಅರಳಾಪುರ ಚೇತನ್, ವಿ.ಸಿ. ಪುರುಷೋತ್ತಮ, ಶಿಕ್ಷಕಿಯರಾದ ವಿ.ಡಿ. ಪವಿತ್ರ, ಸವಿತಾ, ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ಜಿಲ್ಲಾಧ್ಯಕ್ಷ ವಿ.ಸಿ. ಉಮಾಶಂಕರ್, ವಳಗೆರಹಳ್ಳಿ ಗ್ರಾ.ಪಂ ಉಪಾಧ್ಯಕ್ಷೆ ಸಿ.ಕೆ. ಶಶಿಕಲಾ, ಸದಸ್ಯ ವಿ.ಎಚ್. ಶಿವಲಿಂಗಯ್ಯ ಸೇರಿದಂತೆ ಇತರರು ಇದ್ದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಸೋಮವಾರ 17 ಜೂನ್ 2024
MONDAY 17 June 2024

# ಅಯೋಧ್ಯಾನಗರದ ಶಿವಾಚಾರ್ಯ ವೈಶ್ಯ ನಗರ್ತ ವಿದ್ಯಾವರ್ಧಕ ಸಂಘ ವತಿಯಿಂದ ಅದ್ದೂರಿ ಕಾರ್ಯಕ್ರಮ



ಮಡಿವಾಳ:– ಅಯೋಧ್ಯಾನಗರದ ಶಿವಾಚಾರ ವೈಶ್ಯ ನಗರ್ತ ವಿದ್ಯಾವರ್ಧಕ ಸಂಘದ ವತಿಯಿಂದ ಪ್ರಪ್ರಥಮ ಬಾರಿಗೆ ನಗರ್ತ ಜನಾಂಗದ ಮೂಲಪುರುಷರಾದ ಶ್ರೀ ಸಿರಿಯಾಳ ಶೆಟ್ಟಿಯವರ, ಅಕ್ಕಮಹಾದೇವಿಯವರ, ಶ್ರೀ ಬಸವೇಶ್ವರರವರ ಜಯಂತ್ಯೋತ್ಸವ ಮತ್ತು ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ ಸ್ಮರಣೆ ದಿನದ ಆಚರಣೆಯನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಸಿ. ಸೋಮಶೇಖರ ಅವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ನಿವೃತ್ತ ಐ.ಎ.ಎಸ್ ಅಧಿಕಾರಿಗಳು ಇವರು ನಮ್ಮ ಸಮಾಜದ ವತಿಯಿಂದ ಮಹಾನ್ ಸಾಧಕರಾದ ಶ್ರೀ ಸಿರಿಯಾಳ ಶೆಟ್ಟಿಯವರ, ಅಕ್ಕಮಹಾದೇವಿಯವರ, ಶ್ರೀ ಬಸವೇಶ್ವರರವರ ಜಯಂತ್ಯೋತ್ಸವ ಮತ್ತು ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ ಕಾರ್ಯಕ್ರಮವು ಅದ್ದೂರಿಯಾಗಿ ನಡೆಯಿತು. ಇವರೆಲ್ಲರೂ ಅಪರೂಪದ ಸಾಧಕರಾಗಿದ್ದು ನಮ್ಮ ಸಮಾಜದ ವತಿಯಿಂದ ಅವರಿಗೆ ಗೌರವವನ್ನು ಸಲ್ಲಿಸಿ ಅವರ ದಿನಾಚರಣೆ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು ಎಂದರು.

ದಿನಾಂಕ : 16.06.2024ರ ಭಾನುವಾರದಂದು ಬೆಳಿಗ್ಗೆ 10.00 ಘಂಟೆಗೆ ಸ್ಥಳ : ಶ್ರೀ ಸರ್.ಎಂ. ವಿಶ್ವೇಶ್ವರಯ್ಯನವರ ಸಭಾಂಗಣ, ಎಫ್.ಕೆ.ಸಿ.ಸಿ.ಐ (ಚೇಂಬರ್ ಆಫ್ ಕಾಮರ್ಸ್), 2ನೇ ಮಹಡಿ, ಶತಮಾನೋತ್ಸವ ಕಟ್ಟಡ, ಎ.ಎಸ್.ವಿ.ಎನ್.ವಿ. ಭವನದ ಎದುರು, ಕೆಂಪೇಗೌಡ ರಸ್ತೆ, ಬೆಂಗಳೂರು–560 009 ಇಲ್ಲಿ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

ಬೆಂಗಳೂರಿನ ನಗರ್ತ ಪೇಟೆಯಲ್ಲಿರುವ ಶ್ರೀ ಅನ್ನಪೂರ್ಣಾಂಭ ಸಮೇತ ಶ್ರೀ ನಗರೇಶ್ವರಸ್ವಾಮಿ ದೇವಾಲಯದಿಂದ ಬೆಳಗ್ಗೆ 9.00 ಘಂಟೆಗೆ ನಾಲ್ಕು ಶರಣರುಗಳ ಭಾವಚಿತ್ರವನ್ನು ರಥದಲ್ಲಿ ಪುಷ್ಪಾಲಂಕಾರದೊಂದಿಗೆ ಮಂಗಳವಾದ್ಯ, ಚಾಮುಂಡಿ ತಂಡದವರಿಂದ ಡೊಳ್ಳುಕುಣಿತ, ಮತ್ತು ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಬೈರನಹಳ್ಳಿಯ ಶ್ರೀ ನಾಗರಾಜುರವರ ಜಾನಪದ ಕಲಾ ತಂಡದಿಂದ ವೀರಗಾಸೆ ನೃತ್ಯದೊಂದಿಗೆ ನಗರ್ತಪೇಟೆಯಿಂದ ಮೆರವಣಿಗೆ ಹೊರಟು ಅವಿನ್ಯೂ ರಸ್ತೆಯ ಮೂಲಕ ಮೈಸೂರ್‌ಬ್ಯಾಂಕ್ ಸರ್ಕಲ್‌ಗೆ ತಲುಪಿ ತದನಂತರ ಎಫ್ ಕೆಸಿಸಿಐ (ಚೇಂಬರ್ ಆಫ್ ಕಾಮರ್ಸ್) ಕಟ್ಟಡಕ್ಕೆ ತಲುಪಲಾಯಿತು.

ದಿವ್ಯ ಸಾನಿಧ್ಯ ಉದ್ಘಾಟನೆ ಪೂಜ್ಯರಾದ ಶ್ರೀ ಶ್ರೀ ಶ್ರೀ ಪ್ರಭು ಚೆನ್ನಬಸವ ಸ್ವಾಮಿಗಳು, ಶ್ರೀ ಮೋಟಗಿ ಮಠ,

ಅಥಣಿ, ಬೆಳಗಾಂ ಜಿಲ್ಲೆ ಶ್ರೀ ಸಿ. ಸೋಮಶೇಖರ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ನಿವೃತ್ತ ಐ.ಎ.ಎಸ್ ಅಧಿಕಾರಿಗಳು ಇವರು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಶ್ರೀಮತಿ ವೈ.ಸಿ.ಕಮಲ ಪ್ರಾಂಶುಪಾಲರು, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಂಗಳೂರು ಶ್ರೀಮತಿ ಪೂರ್ಣಗೌರಿ ಮಹದೇವ್ ಲೇಖಕರು, ಅಧ್ಯಕ್ಷರು ಕದಾ ಳಿ ಮಹಿಳಾ ವೇದಿಕೆ, ವಿಜಯಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಶ್ರೀ ಎಸ್.ಪ್ರಕಾಶ್.ಬಿ.ಕಾಂ. ಅಧ್ಯಕ್ಷರು,ಎ.ಎಸ್.ವಿ.ಎನ್.ವಿ.ಸಂಘ, ಬೆಂಗಳೂರು, ಶ್ರೀ ಎಂ.ಎಸ್. ಕೃಷ್ಣಮೂರ್ತಿ ಗೌರವ ಕಾರ್ಯದರ್ಶಿ, ಎ.ಎಸ್.ಐ.ಎನ್.ವಿ.ಸಂಘ, ಬೆಂಗಳೂರು, ಶ್ರೀ ಎಂ. ಶಂಕರ್ ಖಜಾಂಚಿ, ಎ.ಎಸ್.ವಿ.ಎನ್.ವಿ.ಸಂಘ, ಬೆಂಗಳೂರು, ಶ್ರೀ ಕೆ.ಸಿ. ಜಯಕುಮಾರ್ ಆಂತರಿಕ ಲೆಕ್ಕಪರಿಶೋಧಕರು, ಎ.ಎಸ್.ಐ.ಎನ್.ವಿ.ಸಂಘ, ಬೆಂಗಳೂರು. ಇವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಎ.ಎಸ್.ಬಿ.ಎನ್.ವಿ. ಸಂಘ.(ರಿ), ಶಿವಾಚಾರ್ಯ ನಗರ್ತ ಯುವಕ ಸಂಘ(ರಿ), ನಗರ್ತ ಮಹಿಳಾ ಸಂಘ (ರಿ) ಎ.ಎಸ್.ಬಿ.ಎನ್.ಬಿ.ಎಸ್.ಹಿರಿಯ ವಿದ್ಯಾರ್ಥಿಗಳ ಸಂಘ(ರಿ), ಸ್ಪಂದನ ವಿದ್ಯಾರ್ಥಿಗಳ ಸಂಘ ಹಾಗೂ ಇತರರು ಇದ್ದರು.

# ಸರ್ಕಾರಿ ಪ್ರೌಢಶಾಲೆ ವತಿಯಿಂದ ಪರಿಸರ ದಿನಾಚರಣೆ

ಚನ್ನರಾಯಪಟ್ಟಣ: ಮಕ್ಕಳ ಸಾಹಿತ್ಯ ಪರಿಷತ್ತು ಹಾಗೂ ಭೂಮಿ ಉಳಿಸಿ ಆಂದೋಲನ ಸಮಿತಿ ಮತ್ತು ಗುಲಸಿಂದ ಸರ್ಕಾರಿ ಪ್ರೌಢಶಾಲೆ ವತಿಯಿಂದ ಪರಿಸರ ದಿನಾಚರಣೆಯನ್ನು ಗಿಡಗಳನ್ನು ನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮ ಉದ್ದೇಶಿಸಿ ಆನಂದ್ ಮಾತನಾಡಿ ಪ್ರತಿ ಒಬ್ಬ ವಿದ್ಯಾರ್ಥಿಗಳು ಪರಿಸರವನ್ನು ಉಳಿಸುವ ಕಡೆ ಗಮನವನ್ನು ಹರಿಸಬೇಕು, ಮನೆಗೊಂದು ಮರವನ್ನು ಕಡ್ಡಾಯವಾಗಿ ಬೆಳೆಸುವ ಮೂಲಕ ಪರಿಸರವನ್ನು ಸಂರಕ್ಷಣೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು, ಕೆರೆಕಟ್ಟೆಗಳನ್ನು ಉಳಿಸುವ ಜೊತೆಗೆ ಗಿಡಮರಗಳನ್ನು ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವೆಂದು ತಿಳಿಸಿದರು.ಇದೇ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಿಎನ್ ಅಶೋಕ್, ಕೆಂಪೇಗೌಡ ವೇದಿಕೆ ಅಧ್ಯಕ್ಷರಾದ ಕಾಳೆನಹಳ್ಳಿ ಆನಂದ್, ಮಕ್ಕಳ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಾದ ಸಿದ್ದೇಶ್,ಮಹಾದೇವ್, ಜಗದೀಶ್,ಪತ್ರಕರ್ತ ಜಯರಾಮ್,ನಾಗೇಶ್, ಸಿಎನ್ ಅರುಣ್ ಕುಮಾರ್, ಬಿ ಆರ್ ಸಿ ಅನಿಲ್,ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕರಾದ ಪುಟ್ಟರಾಜು, ಸೇರಿದಂತೆ ಇತರರು ಹಾಜರಿದ್ದರು.



# ಬಿಇಡಿಯಲ್ಲಿ ಚಿನ್ನದ ಪದಕ ಪಡೆದ ನವ್ಯರಾಜ್‌ಗೆ ವಿದ್ಯಾರ್ಥಿ ರತ್ನ ಬಿರುದು ಪ್ರದಾನ

ಕೊರಟಗೆರೆ:– ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ 2024– 2027 ರವರೆಗೆ ತಾಲ್ಲೂಕು ಅದ್ಯಕ್ಷರಾಗಿ



ಎಸ್.ಆರ್.ಸೋಮಶೇಖರ್ ಸತತ ಮೂರನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೊರಟಗೆರೆ ಪಟ್ಟಣದ ಸಂಘದ ಕಛೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅದ್ಯಕ್ಷರಾಗಿ ಸೋಮಶೇಖರ್, ಉಪಾಧ್ಯಕ್ಷರಾಗಿ ಮೂಡಲಗಿರಿಯಪ್ಪ, ಕಾರ್ಯದರ್ಶಿಯಾಗಿ ರವಿಕುಮಾರ್ ಎ.ಆರ್., ಸಹಕಾರ್ಯದರ್ಶಿ ಯಾಗಿ ಬಿ.ಆರ್.ಲಕ್ಷೀಕಾಂತ, ಕೋಶಧ್ಯಕ್ಷರಾಗಿ ಫಾರುಖ್ ಅಹಮದ್‌ರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ, ಮೂರು ವರ್ಷಕ್ಕೆ ಒಮ್ಮೆ ವಿದ್ಯುತ್ ಗುತ್ತಿಗೆದಾರರ ಚುನಾವಣೆ ನಡೆಯಲಿದ್ದು ಚುನಾವಣೆ ಅಧಿಕಾರಿಯಾಗಿ ಜಿಲ್ಲಾ ಪದಾಧಿಕಾರಿ ಪ್ರದೀಪ್ ಕುಮಾರ್ ಕರ್ತವ್ಯ ನೆರವೇರಿಸಿದರು. ನೂತನ ಅದ್ಯಕ್ಷ ಸೋಮಶೇಖರ್ ವಿದ್ಯುತ್ ಗುತ್ತಿಗೆದಾರರ ಸಂಘದ ಕಛೇರಿಯಲ್ಲಿ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿ ತಾಲ್ಲೂಕು ಸಂಘದ ಪದಾಧಿಕಾರಿಗಳು ಸತತ ಮೂರನೆ ಬಾರಿಗೆ ನನ್ನ ಮೇಲೆ ವಿಶ್ವಾಸವಿಟ್ಟು ಅವಿರೋಧವಾಗಿ ಅಯ್ಕೆ ಮಾಡಿದ್ದಾರೆ, ಹಲವು ವರ್ಷಗಳಿಂದ ಸಂಘದ ಕೆಲಸ ಕಾರ್ಯಗಳನ್ನು ಪ್ರಮಾಣಿಕವಾಗಿ ಮಾಡಿಕೊಂಡು ಬರುತ್ತಿದ್ದು ಈ ನೂತನ ಮೂರು ವರ್ಷದ ಅವಧಿಯಲ್ಲಿ ಸಂಘಕ್ಕೆ ಸ್ವಂತ ನಿವೇಶನ ಕಟ್ಟಡವನ್ನು ನಿರ್ಮಿಸಲು ಶ್ರಮಿಸುತ್ತೇವೆ, ಈಗಾಗಲೆ ಸಂಘದ ಕಛೇರಿಯಲ್ಲಿ ಈ ಸ್ಟಾಂಪಿಗ್ ಸೌಲಭ್ಯವನ್ನು ಮಾಡಲಾಗಿದೆ ಎಂದರು.

ನೂತನ ಅದ್ಯಕ್ಷರಿಗೆ ಪ್ರಮಾಣ ಪತ್ರ ನೀಡಿ ಮಾತನಾಡಿದ ಜಿಲ್ಲಾದ್ಯಕ್ಷ ಅಶೋಕ್ ಕುಮಾರ್ ಮಾತನಾಡಿ ನಮ್ಮ ವಿದ್ಯುತ್ ಗುತ್ತಿಗೆದಾರರ ಸಂಘ 1922 ರಲ್ಲಿ ಪ್ರಾರಂಭವಾಗಿ ಇಲ್ಲಿಯವರೆಗೆ ಸೇವೆ ಸಲ್ಲಿಸಿಕೊಂಡು ಬರುತ್ತಿದೆ, ನಮ್ಮ ಸಂಘವು ಸಂಘದ ಚಟುವಟಿಕೆಯೊಂದಿಗೆ ಸಾಮಾಜಿಕ ಶೈಕ್ಷಣಿಕ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದು ಕೊರಟಗೆರೆ ತಾಲ್ಲೂಕು ಸಂಘ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಅದ್ಯಕ್ಷ ಸೋಮಶೇಖರ್ ರವರ ಮೇಲೆ ನಂಬಿಕೆ ಇಟ್ಟು ಮೂರು ಬಾರಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ, ಅದರೊಂದಿಗೆ ಸೇವಾ ಮನೂಭಾವನೆ ಉಳ್ಳ ಉಪಾದ್ಯಕ್ಷ, ಕಾರ್ಯದರ್ಶಿ, ಸಹಕಾರ್ಯದರ್ಶಿ, ಕೋಶಾದ್ಯಕ್ಷರನ್ನು ಅರಿಸಿರುವುದು ಸಂಘ ಮುಂದೆ ಇನ್ನು ಉತ್ತಮವಾಗಿ ಕೆಲಸ ಮಾಡಲಿದೆ ಎಂದರು. ಗೋಷ್ಠಿಯಲ್ಲಿ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ರಾಜಣ್ಣ, ಜಿಲ್ಲಾ ಸಂಘದ ಪದಾಧಿಕಾರಿಗಳಾದ ನಾಗರಾಜು, ಶಿವಕುಮಾರ್, ಮಹಬೂಬ್ ಖಾನ್, ಪ್ರಕಾಶ್, ಮಾಜಿ ಜಿಲ್ಲಾದ್ಯಕ್ಷ ಸಿದ್ದಲಿಂಗಸ್ವಾಮಿ ಸೇರಿದಂತೆ ಸಂಘದ ತಾಲ್ಲೂಕು ನಿರ್ದೇಶಕರುಗಳು ಹಾಜರಿದ್ದರು.

# ಮಾದಕ ವಸ್ತು ವಿರೋಧಿ ದಿನಾಚರಣೆ

ಸಾಗರ ತಾಲೂಕಿನ ಕಾಗೆ ಹಳ್ಳ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ವತಿಯಿಂದ ಮಾದಕ ವಸ್ತು ವಿರೋಧಿ ದಿನಾಚರಣೆ ಮತ್ತು ಸಂಕಲ್ಪ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು .ಈ ಕಾರ್ಯಕ್ರಮದಲ್ಲಿ ಸಂಘದ ಯೋಜನಾಧಿಕಾರಿ ಶಾಂತಾನಾಯ್ಕ ಅವರು ಪಾಲ್ಗೊಂಡು ಮಹಿಳೆಯರ ಕುರಿತು ಮಾತನಾಡುತ್ತಾ ಪೋಷಕರು ತಮ್ಮ ಮಕ್ಕಳ ಮೇಲೆ ತುಂಬಾ ಗಮನ ಹರಿಸಬೇಕು ಇತ್ತೀಚಿನ ದಿನಗಳಲ್ಲಿ ಕಾಲೇಜು ಹಾಗೂ ಶಾಲೆಯಲ್ಲಿ ಮಕ್ಕಳು



ಹಾದಿ ತಪ್ಪುತ್ತಾ ಇದ್ದು ಅದರ ಕಡೆ ಹೆಚ್ಚಿನ ಗಮನ ಹರಿಸಬೇಕು ಮಕ್ಕಳು ಯಾವುದೇ ದುಶ್ಚಟಗಳಿಗೆ ಮಾರುಹೋಗದಂತೆ ನಾವು ತಡೆಯಬೇಕಾಗಿದೆ ನಮ್ಮ ಖಾವಂದರ ಆಶಯವು ಅದೆ ಅಗಿದೆ . ಎಂದರು...

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಕುಮಾರಿ ಶ್ರಾವ್ಯ ಇವರು ಕಾರ್ಯಕ್ರಮವನ್ನೂ ಉದ್ದೇಶಿಸಿ ಮಾಹಿತಿಯನ್ನು ನೀಡಿದರು .ಮಕ್ಕಳಿಗೆ ಇಗ ಆಗಲೆ ನಾವು ತುಂಬಾ ಪ್ರೀ ಬಿಟ್ಟಿದ್ದೇವೆ ಅದನ್ನು ನಾವು ಅಂದರೆ ಪೋಷಕರು ಗಮನಸಿ ಮಕ್ಕಳು ಮಾದಕ ವಸ್ತುಗಳಿಗೆ ಮಾರು ಹೋಗದಂತೆ ತಡೆಯಬೇಕು ಅವರಿಗೆ ಎನಾದರು ಆ ತರಹದ ಹವ್ಯಾಸ ಇದ್ದರೆ ಅವರಿಗೆ ಅದನ್ನು ಹೇಗೆ ಬಿಡಿಸಬೇಕು ಎಂದು ಅಲ್ಲಿ ಪೋಷಕರಿಗೆ ಮಾಹಿತಿ ತಿಳಿಸಿದರು...

ಈ ಸಂದರ್ಭದಲ್ಲಿ ಒಕ್ಕೂಟದ ಪದಾಧಿಕಾರಿಗಳು ಮೇಲ್ವಿಚಾರಕರಾದ ಕಮಲಾಕ್ಷಿ ಸೇವಾಪ್ರತಿನಿಧಿ ಪ್ರೇಮ ಸಂಘದ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು..

# ವಾಟೇಹಳ್ಳ ಗ್ರಾಮದಲ್ಲಿ ಕಾಡಾನೆ ದಾಳಿ



ಸಕಲೇಶಪುರ: ತಾಲ್ಲೂಕಿನ ವಾಟೇಹಳ್ಳ ಗ್ರಾಮದಲ್ಲಿ ಕಾಡಾನೆ ದಾಳಿಯಿಂದ ತುಳಿತಕ್ಕೊಳಗಾದಂತಹ ದಿವಾಕರ ಶೆಟ್ಟಿಯವರ ಆರೋಗ್ಯವನ್ನ ವಿಚಾರಿಸುವ ಸಲುವಾಗಿ ಜಿಲ್ಲಾಸ್ಪತ್ರೆಗೆ ಹಾಸನ ಲೋಕಸಭಾ ಕ್ಷೇತ್ರದ ನೂತನ ಸಂಸದರಾದಂತಹ ಸನ್ಮಾನ್ಯ ಶ್ರೀ ಶ್ರೇಯಸ್ ಪಟೇಲ್ ರವರು ಗಾಯಾಳುವಿನ ಆರೋಗ್ಯವನ್ನು ವಿಚಾರಿಸಿ ನಂತರ ಹೆಚ್ಚಿನ ಚಿಕಿತ್ಸೆಯನ್ನು ನೀಡುವಂತೆ ವೈದ್ಯಾಧಿಕಾರಿಗಳಿಗೆ ಸಲಹೆಯನ್ನ ನೀಡಿ ಆರ್ಥಿಕ ಸಹಾಯವನ್ನು ಮಾಡಿದರು ಇವರ ಅವರು ಕೂಡ ಇದ್ದು ಗಾಯಾಳುವಿನ ಆರೋಗ್ಯವನ್ನು ವಿಚಾರಿಸಿ ಸರ್ಕಾರದಿಂದ ದೊರೆಯುವಂತಹ ಪರಿಹಾರವನ್ನ ಕೊಡಿಸುವುದಾಗಿ ಭರವಸೆಯನ್ನು ನೀಡಿದರು.

ಇದೇ ಸಂಧರ್ಭದಲ್ಲಿ ಸಕಲೇಶಪುರ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್ ಮುಖಂಡರಾದ ಸನ್ಮಾನ್ಯ ಶ್ರೀ ಮುರಳಿ ಮೋಹನ್.ಮಾಜಿ ಎಂಎಲ್‌ಸಿ. ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಸನ್ಮಾನ್ಯ ಶ್ರೀ ಎಂ ಗೋಪಾಲಸ್ವಾಮಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಕಾಂಗ್ರೆಸ್ ಮುಖಂಡರುಗಳು ಕಾರ್ಯಕರ್ತರು ಹಾಜರಿದ್ದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಸೋಮವಾರ 17 ಜೂನ್ 2024
MONDAY 17 June 2024

# ಕೊಲೆ ಆರೋಪಿಗಳಿಗೆ ಗಲ್ಲು ಶಿಕ್ಷೆ ನೀಡಲು ಆಗ್ರಹ



ಮುಂಜಾನೆ ವಾರ್ತೆ ಸುದ್ದಿ ತಾಳಿಕೋಟಿ: ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಹತ್ಯೆಯನ್ನು ಖಂಡಿಸಿ ರಾಮಲಿಂಗಯ್ಯ ಶ್ರೀಗಳ ನೇತೃತ್ವದಲ್ಲಿ ತಾಲೂಕ ಬೇಡ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಶನಿವಾರ ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಬೇಡ ಜಂಗಮ ಸಮಾಜದ ಗೌರವಾಧ್ಯಕ್ಷರಾದ ರಾಮಲಿಂಗಯ್ಯ ಮಹಾಸ್ವಾಮಿಗಳು ಮಾತನಾಡಿ ಬೇಡ ಜಂಗಮ ಸಮಾಜ ಗುರುವಿನ ಸ್ಥಾನದಲ್ಲಿದೆ ಹರ ಮುನಿದರೂ ಗುರು ಕಾಯುವನು ಎಂಬಂತೆ ಸಮಾಜದ ಒಳಿತಿಗಾಗಿ ನಾವು ಕೆಲಸ ಮಾಡುತ್ತೇವೆ. ಗುರು ಸಮಾಜದ ಮೇಲಿನ ಈ ರೀತಿಯ ದೌರ್ಜನ್ಯ ಅತಿ ದೊಡ್ಡ ಪಾಪ ಕಾರ್ಯವಾಗಿದೆ ಇಂಥವರಿಗೆ ಎಂದೂ ಮೋಕ್ಷ ಸಿಗೋದಿಲ್ಲ ರೇಣುಕಾ ಸ್ವಾಮಿಯವರ ಕೊಲೆಯನ್ನು ಇಡೀ ಸಮಾಜ ಅತ್ಯುಗ್ರವಾಗಿ ಖಂಡಿಸುತ್ತದೆ ತಪ್ಪಿತಸ್ಥರು ಯಾರೇ ಇರಲಿ ಅವರಿಗೆ ಕಠಿಣ ಶಿಕ್ಷೆ ಆಗಬೇಕು ಎಂಬುದು ಸರ್ಕಾರಕ್ಕೆ ನಮ್ಮ ಆಗ್ರಹವಾಗಿದೆ.

ಸಂತ್ರಸ್ತ ಕುಟುಂಬದ ನೆರವಿಗಾಗಿ ನಾವು ಜೋಳಿಗೆ ಹಾಕಿ ಸಮಾಜದ ಜನರಿಂದ ಹಣ ಸಂಗ್ರಹಿಸಿ ಕೊಡುತ್ತೇವೆ ಈ ಪ್ರಕರಣದಲ್ಲಿ ನ್ಯಾಯ ಸಿಗದೇ ಹೋದಲ್ಲಿ ನಾವು ಉಗ್ರ ಹೋರಾಟಕ್ಕೂ ಹಿಂಜರಿಯುವುದಿಲ್ಲ ಎಂದರು. ತಾಲೂಕ ಬೇಡ ಜಂಗಮ ಸಮಾಜದ ಉಪಾಧ್ಯಕ್ಷ ಶಿವಶಂಕರ ಹಿರೇಮಠ ಹಾಗೂ ಶಿಕ್ಷಕ ಐ.ಬಿ. ಹಿರೇಮಠ ಮಾತನಾಡಿ ನಟ ದರ್ಶನ ಹಾಗೂ ಅವರ ಗ್ಯಾಂಗ್ ಮಾಡಿದ ಈ ಬರ್ಬರ ಕೊಲೆಯನ್ನು ಅಖಂಡ ವೀರಶೈವ ಲಿಂಗಾಯತ ಹಾಗೂ ಬೇಡ ಜಂಗಮ ಸಮಾಜ ಅತ್ಯುಗ್ರವಾಗಿ ಖಂಡಿಸುತ್ತದೆ. ಈ ಕೊಲೆ ಮಾನವೀಯತೆಯ ಕೊಲೆಯಾಗಿದೆ ಆರೋಪಿಗಳು ಎಷ್ಟೇ ಪ್ರಭಾವಿಯಾಗಿದ್ದರು ಅವರಿಗೆ ರಕ್ಷಣೆ ಸಿಗಬಾರದು ಕಾನೂನಿನ ಅಡಿಯಲ್ಲಿ ಅವರಿಗೆ ಉಗ್ರವಾದ ಶಿಕ್ಷೆಯನ್ನು ಕೊಡಬೇಕು. ದೇಶದ ಕಾನೂನು ಎಲ್ಲರಿಗೂ ಒಂದೇ ಆಗಿದೆ ಅವನು ನಟ ಆಗಿರಲಿ ರಾಜಕಾರಣಿಯಾಗಿರಲಿ ಒಬ್ಬ ಸಾಮಾನ್ಯ ವ್ಯಕ್ತಿಯಾಗಿರಲಿ. ಸರ್ಕಾರ ಈ ನಿಟ್ಟಿನಲ್ಲಿ ಮಾಡಿದ ಇಲ್ಲಿಯವರೆಗಿನ ತನಿಖಾ ಕ್ರಮವು ಸಮಾಧಾನಕರವಾಗಿದೆ ಅದನ್ನು ಇನ್ನಷ್ಟು ಚುರುಕುಗೊಳಿಸಬೇಕು.

ಈ ಪ್ರಕರಣನ್ನು ಭೇದಿಸುವಲ್ಲಿ ಮಾಧ್ಯಮದವರ ಪಾತ್ರವೂ ಅತಿ ಮುಖ್ಯವಾಗಿದ್ದು ಅವರ ಜನಪರ ಕಾಳಜಿಗೆ ಅಭಿನಂದಿಸುತ್ತೇವೆ ಎಂದರು. ಈ ಸಮಯದಲ್ಲಿ ತಾಲೂಕ ಬೇಡ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶರಣಯ್ಯ ಸ್ವಾಮಿ ಹಿರೇಮಠ. ಉಪಾಧ್ಯಕ್ಷರಾದ ಶಿವಲಿಂಗಯ್ಯ ಹಿರೇಮಠ. ಶ್ರೀಗುರು ಹಿರೇಮಠ. ಶಿವಶಂಕರಯ್ಯಹಿರೇಮಠ. ಗೌರವ ಕಾರ್ಯದರ್ಶಿ ಮಲ್ಲಿಕಾರ್ಜುನ ಕೊಡಗಾನೂರ ಸಹ ಕಾರ್ಯದರ್ಶಿ ಈರಯ್ಯ ಹಿರೇಮಠ.

ಶಾಂತಯ್ಯ ಗಣಾಚಾರಿ. ಖಜಾಂಚಿ ಕಾಶಿನಾಥ ಹಿರೇಮಠ. ಸಂಘಟನಾ ಕಾರ್ಯದರ್ಶಿ ನಾಗಭೂಷಣ ಡೋಣೂರು ಮಠ. ಗಜದಂಡಯ್ಯ ಹಿರೇಮಠ. ಸದಸ್ಯರಾದ ಸುರೇಶ ಹಿರೇಮಠ. ಶಿವಬಸಯ್ಯ ಹಿರೇಮಠ. ಶರಣಬಸಯ್ಯ ಹಿರೇಮಠ. ಸಂಗನಬಸಯ್ಯ ಹಿರೇಮಠ. ಮಲ್ಲಯ್ಯ ವಿಭೂತಿ. ಮಂಜುನಾಥ ಡೋಣೂರು ಮಠ. ವಿಜಯಕುಮಾರ ಮಠ. ಪ್ರಕಾಶ ಹಿರೇಮಠ. ಶಿವಬಸಯ್ಯ ಹಿರೇಮಠ. ಶಿವಯೋಗಿ ಹಿರೇಮಠ. ಶಿವಲಿಂಗಯ್ಯ ನಾವದಗಿ. ಶಂಕ್ರಯ್ಯ ಬ್ಯಾಲ್ಯಾಳ. ಚೆನ್ನಯ್ಯ ಹಿರೇಮಠ. ಶಿವಶರಣ ಮಠಪತಿ. ವಾಗೀಶ ಕೊಡಗಾನೂರ. ಶಂಕ್ರಯ್ಯ ಚರಂತಿಮಠ. ಶ್ರೀಶೈಲ ಹಿರೇಮಠ ಕಂದಾಯ ನಿರೀಕ್ಷಕ ವಿ.ಬಿ.ಸಿಂದಗಿ.ಮುನ್ನಾ ಅತ್ತಾರ ಮತ್ತಿತರರು ಇದ್ದರು.

# ಶ್ರೀ ಕಾಲಭೈರವೇಶ್ವರ ದೇವಾಲಯ ಪುನರ್ ನಿರ್ಮಾಣ

ಕೆ.ಆರ್.ಪೇಟೆ: ತಾಲ್ಲೂಕಿನ ಬೂಕನಕೆರೆ ಹೋಬಳಿಯ ರಾಜೇನಹಳ್ಳಿ ಗ್ರಾಮದ ಶ್ರೀ ಕಾಲಭೈರವೇಶ್ವರ ದೇವಾಲಯ ಪುನರ್ ನಿರ್ಮಾಣಕ್ಕೆ ಮಂಡ್ಯ ಜಿಲ್ಲಾ ಹಾಲು ಒಕ್ಕೂಟ ನಿರ್ದೇಶಕ ಕೆ.ರವಿ (ಡಾಲು ರವಿ) ಆರ್ಥಿಕ ಸಹಾಯ ನೀಡಿದರು.

ಪಟ್ಟಣದಲ್ಲಿರುವ ತಮ್ಮ ನಿವಾಸದ ರಾಜೇನಹಳ್ಳಿ ಗ್ರಾಮಸ್ಥರ ಸಮ್ಮುಖದಲ್ಲಿ ಆರ್ಥಿಕ ಧನಸಹಾಯ ನೀಡಿ



ಮಾತನಾಡಿರು. ಇಂತಹ ಪುಣ್ಯಕಾರ್ಯಕ್ಕೆ ನನ್ನ ಕೈಲಾದ ಪುಟ್ಟ ಸಹಾಯ ಮಾಡುತ್ತಿದ್ದೇನೆ. ಪ್ರತಿಯೊಬ್ಬರೂ ದೇವಾಲಯ ನಿರ್ಮಾಣ ಕಾರ್ಯಕ್ಕೆ ತಮ್ಮ ಶಕ್ತಾನುಸಾರ ದೇಣಿಗೆ ನೀಡಿ ದೇವಾಲಯ ನಿರ್ಮಾಣಕ್ಕೆ ಕೈಜೋಡಿಸುವ ಮೂಲಕ ದೇವರ ಕೃಪೆಗೆ ಪಾತ್ರರಾಗಬೇಕು.

ಮನುಷ್ಯನಿಗೆ ಬೇಕಾದ ಶಾಂತಿ-ನೆಮ್ಮದಿಯನ್ನು ಮಾರುಕಟ್ಟೆಯಲ್ಲಿ ಕೊಂಡುಕೊಳ್ಳಲು ಸಾಧ್ಯವಿಲ್ಲ.ಕೇವಲ ಬಡವರಿಗೆ ದಾನ ಮಾಡುವ ಮೂಲಕ ಹಾಗೂ ದೇವಾಲಯದಲ್ಲಿ ಭಕ್ತಿಯಿಂದ ಪ್ರಾರ್ಥನೆ ಸಲ್ಲಿಸುವ ಮೂಲಕ ಪಡೆದುಕೊಳ್ಳಬಹುದಾಗಿದೆ ಎಂದು ಮನ್ಮುಲ್ ನಿರ್ದೇಶಕ ಡಾಲು ರವಿ ಅಭಿಪ್ರಾಯಪಟ್ಟರು.

ಬಳಿಕ ಮಾತನಾಡಿದ ಗ್ರಾಮದ ಹಿರಿಯ ಮುಖಂಡ ಹಾಗೂ ಸಮಾಜ ಸೇವಕ ರೇವಣ್ಣ ತಾಲೂಕಿನ ಅದ್ಯಂತ ಸಮಾಜಮುಖಿ ಕಾರ್ಯ ತೊಡಗಿರುವ ಡಾಲು ರವಿ ರವರನ್ನ ಕಳೆದ ಒಂದು ವಾರದ ಹಿಂದೆ ಭೇಟಿ ಮಾಡಿ ಗ್ರಾಮದ ಶ್ರೀ ಕಾಲ ಭೈರವೇಶ್ವರ ದೇವಾಲಯದ ಪುನರ್ ನಿರ್ಮಾಣ ಕಾಮಗಾರಿಗೆ ತಮ್ಮ ಸಹಾಯ ನೀಡಬೇಕೆಂದು ಮನವಿ ಸಲ್ಲಿಸಿದ್ದೋ.

ಮನವಿ ಸ್ಪಂದನೆಯಾಗಿ ಇಂದು ಅವರ ನಿವಾಸಕ್ಕೆ ಆಹ್ವಾನಿಸಿ ನಿರ್ಮಾಣ ಹಂತದಲ್ಲಿರುವ ದೇವಾಲಯಕ್ಕೆ ತಮ್ಮ ಕೈಲಾದ ಹಣವನ್ನು ದೇಣಿಗೆಯಾಗಿ ನೀಡುವ ಮೂಲಕ ನಮ್ಮ ಗ್ರಾಮದ ದೇವಾಲಯ ನಿರ್ಮಾಣಕ್ಕೆ ಸಹಕಾರಿಯಾಗಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶಿಕ್ಷಕ ಪದ್ಮೇಶ್ ,ಗ್ರಾಮದ ಹಿರಿಯ ಮುಖಂಡರಾದ ಚಿಕ್ಕಬೋರೇಗೌಡ, ಸ್ವಾಮಿಗೌಡ, ವೆಂಕಟರಮಣೆಗೌಡ, ಶಿವಲಿಂಗೆಗೌಡ,ಜಾಲೆಂದ್ರ, ರಾಕೇಶ್, ಸೇರಿದಂತೆ ಉಪಸ್ಥಿತರಿದ್ದರು.

ದಿನಾಂಕ 16-06-2924ರಂದು ಶ್ರೀ ಯಾಜ್ಞವಲ್ಕ್ಯರ ಜಯಂತಿಯನ್ನು ಅದ್ಧುಯಾಗಿ ಆಚರಿಸಲಾಯಿತು. ತಾಳಿಕೋಟೆ ಪಟ್ಟಣದ ಹಾಗೂ ಸತ್ತಲಿನ ಎಲ್ಲ ಗ್ರಾಮದ ವಿಪ್ರ ಬಂಧುಗಳು ಸೇರಿ ಬೆಳಿಗ್ಗೆ ಶೊಭಾಯಾತ್ರಯಲ್ಲಿ ಪಾಲ್ಗೋಂಡಿದ್ದರು.

ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ವೈದಿಕವೃಂದದವರಿಂದ ಯಾಜ್ಞವಲ್ಕ್ಯರ ಅಷ್ಟೋತ್ತರ ಜರುಗಿತು ಶ್ರೀ ವೆಂಕಟೇಶಾಚಾರ್ಯ ಗ್ರಾಮಪುರೋಹಿತ ಇವರಿಂದ ಶ್ರೀ ಯಾಜ್ಞವಲ್ಕ್ಯರ ಜೀವನ ಮತ್ತು ಸಾಧನೆ ಕುರಿತು ಉಪನ್ಯಾಸ ಮಾಡಲಾಯಿತು... ಪ್ರಸಕ್ತ ವರ್ಷದಲ್ಲಿ SSLC ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಶ್ರೀ ಶ್ರೀನಿವಾಸ ಎಸ್.ದೇಶಪಾಂಡ,ಶಿವಪ್ರಸಾದ ಸಂ.ಜೋಷಿ ಮತ್ತು ಕೃಪಾ ಕೃ. ಗ್ರಾಮಪುರೋಹಿತ ಇವರಿಗೆ ಪ್ರತಿಭಾ ಪುರಸ್ಕಾರ ನಿಡಲಾಯಿತು... ಮಹಿಳಾ ಭಜನಾ ಮಂಡಳಿಯವರಿಂದ ನಾಮಸಂಕೀರ್ತನೆ ಹೊಸದಾಗಿ ರಚನೆಯಾದ ತಾಲೂಕಾ ಬ್ರಾಹ್ಮಣ ಸಮಾಜದ ಬಗ್ಗೆ ಉದ್ಧೇಶ ಹಾಗೂ ಕಾರ್ಯವ್ಯಾಪ್ತಿಯ ಬಗ್ಗೆ ಅಧ್ಯಕ್ಷರಾದ ಶ್ರೀ ಭೀಮರಾವ ಕುಲಕರ್ಣಿ ಇವರು ವಿವರಿಸಿದರು. ಕಾರ್ಯದರ್ಶಿಗಳಾದ ಶ್ರೀ ಹನುಮೇಶ ಕುಲಕರ್ಣಿಯವರು ನಿರುಪಣೆಯನ್ನು ಮಾಡಿದರು...



# ಸಾಗರ ಹೊಸನಗರ ತಾಲ್ಲೂಕು ಉಪ್ಪಾರ ಸಮಾಜದ ಸಂಘಟನಾ ಸಂಪರ್ಕ ಸಭೆ

ತಾಲೂಕಿನಲ್ಲಿ 11 ಸಾವಿರ ಜನರಿದ್ದು, ಪ್ರತಿ ಊರಿನಲ್ಲೂ ಒಂದಷ್ಟು ಮನೆಗಳಿವೆ. ಒಟ್ಟು 600ಕ್ಕೂ ಹೆಚ್ಚು ಕುಟುಂಬಗಳಿವೆ. ಸಮಾಜ, ಸಂಘಟನೆ ಕುರಿತು ನಿವೃತ್ತ ಪ್ರಾಂಶುಪಾಲ ಲಕ್ಕಪ್ಪ ತಂಗಲಿ ಕಡೂರು



ಸಮಗ್ರ ಮಾಹಿತಿ ನೀಡಿದರು.

ಖಜಾಂಚಿ ಕಂಕಾರಿ ನಾಗರಾಜ್ ಮಾಜಿ ಮಹಾಪೌರರು ಮಾತನಾಡುತ್ತಾ ಸಮಾಜದ ಕಾರ್ಯಕ್ರಮ ಈಗ ನಮ್ಮ ಸಮಾಜದಲ್ಲಿ 100ಕ್ಕಗ್ ಹೆಚ್ಚು ಉಪ ಪಂಗಡವಿದೆ. ಅದರಿಂದ ಅಖಂಡ ಸಮಾಜ ಸಂಘಟನೆ ಸಾಧ್ಯ. ನಮ್ಮೊಂದಿಗೆ ಸ್ವಾಮೀಜಿ, ರಾಜ್ಯ, ಜಿಲ್ಲಾ ಸಂಘಟನೆಗಳು ಇವೆ. ಎಲ್ಲ ಸೌಲಭ್ಯ ಕೊಡಿಸುವ ಕ್ರಮ ತೆಗೆದುಕೊಳ್ಳುತ್ತೇವೆ. ಒಂದಷ್ಟು ಜನ ಒಟ್ಟಾಗಿ ಹೋಗಿ ವಿಚಾರಿಸಿದಾಗ ಕೆಲಸಗಳು ಆಗುತ್ತವೆ. ನಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡೋಣ. ಅದರಿಂದ ಬದುಕಿನ ಭವಿಷ್ಯ ಉಜ್ವಲ ಮಾಡೋಣ. ಮುಂದೆ ನಡೆಯುವ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿ ಚುನಾವಣೆ ಗಳಲ್ಲೂ ನಿಲ್ಲಬೇಕು. ಅಧಿಕಾರ ಪಡೆದು ನಮ್ಮ ಸಮಾಜದೊಂದಿಗೆ ಇತರ ಹಿಂದುಳಿದವರನ್ನು ಮೇಲಕ್ಕೆ ಕೊಂಡೊಯ್ಯಲು ನಿಲ್ಲೋಣ. ರಾಜಕೀಯವಾಗಿ ಇರುವ ಅವಕಾಶ ಸದುಪಯೋಗ ಪಡಿಸಿಕೊಳ್ಳೋಣ. ಇದರಲ್ಲಿ ರಾಜಕೀಯ ಮಾಡದೇ ಎಲ್ಲರು ನಮ್ಮ ಜನಾಂಗದ ಅಭಿವೃದ್ಧಿಗೆ ಶ್ರಮಿಸೋಣ ಎಂದು ಕರೆ ನೀಡಿದರು.

ಚಿಕ್ಕಮಗಳೂರು ಜಿಲ್ಲೆ ಅಧ್ಯಕ್ಷ ನಾಗರಾಜ ಅವರು ಮಾತನಾಡಿ. ನಾವು ಸಂಘಟನೆ ಮಾಡಿಕೊಂಡಾಗ ನಮ್ಮ ಸಮುದಾಯವನ್ನು ಕಾಪಾಡಿಕೊಳ್ಳಲು ಸಾಧ್ಯ. ಗುರುಗಳು ಇಡೀ ದೇಶ ಸುತ್ತಾಡಿ ಸಮಾಜ ಸಂಘಟನೆ ಕುಲ ದ ಉಳಿವಿಗೆ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಜತೆಯಲ್ಲಿ ಸಮಾಜದ ವರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಕಷ್ಟ ವಾಗುತ್ತಿದ್ದಾರೆ ಸಮುದಾಯದ ಶಾಲೆಗೆ ಸೇರಿಸಿ. ಉಚಿತ ಶಿಕ್ಷಣ ಕೊಡುವ ಪ್ರಯತ್ನವೂ ನಡೆಯುತ್ತಿದೆ ಎಂದರು

ಜಿಲ್ಲಾಧ್ಯಕ್ಷ ಎಸ್. ಟಿ. ಹಾಲಪ್ಪ, ಗುರುಗಳ ಮಾರ್ಗದರ್ಶನ ದೊಂದಿಗೆ ಈ ಸಭೆ ನಡೆಯುತ್ತಿದೆ. ಸಂಪರ್ಕದಿಂದ ಸಮಾಜ ಸಂಘಟನೆ ನಡೆಯುತ್ತದೆ.ನಮ್ಮ ನಡುವೆ ಸಂಬಂಧ ಬೆಳೆದಾಗ ಸಂಘಟನೆ ಬೆಳೆಯುತ್ತದೆ.ಸಂಪರ್ಕದ ಕೊರತೆಯಿಂದ ನಾವು ಇಷ್ಟು ದಿನ ದೂರ ಇದ್ದೆವು. ಮುಂದೆ ಶೈಕ್ಷಣಿಕ, ಆರ್ಥಿಕ ಸಾಮಾಜಿಕ ಬೆಳವಣಿಗೆಗೆ ಉತ್ತೇಜನ ಸಿಗುತ್ತದೆ. ನಾವೆಲ್ಲರೂ ಸೇರಿ ಸಮಾಜ ಕಟ್ಟಿ ಬೆಳೆಸಬೇಕು. ಸರ್ಕಾರದ ಮಟ್ಟದಿಂದ ಸಹಾಯ ಪಡೆದು ಸಮುದಾಯದ ಶಾಲೆ, ಹಾಸ್ಟೆಲ್, ಸಮುದಾಯ ಭವನ ನಿರ್ಮಾಣಕ್ಕೆ ಆದ್ಯತೆ ಪಡೆಯೋಣ. ನಾವು ಬೆಳೆದಾಗ ನಮ್ಮ ಸಮಾಜ ಬೇಳಿಸಿದಾಗ ಮಾತ್ರ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ. ಗುರು ಸಿಕ್ಕಿದ್ದರೆ. ಗುರಿ ಇಟ್ಟುಕೊಳ್ಳಲು ಸಾಧ್ಯ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತಾನಾಡಿದ ಬಸವರಾಜ್ ಅವರು ನಮ್ಮ ಸಮಾಜದ ಹಲವಾರು ತಮ್ಮ ಮೂಲ ಸಮುದಾಯದ ಹೆಸರು ಹೇಳಲು ನಾಚಿಕೆ ಪಟ್ಟುಕೊಳ್ಳುತ್ತಿರುವುದು ಇಂದಿಗೂ ಇದೆ. ಇದನ್ನು ಹೋಗಲಾಡಿಸಲು ಸಂಘಟನೆ ಮುಖ್ಯ. ಎಲ್ಲರೂ ಒಟ್ಟಾಗಿ ಸೇರಿ ಸಂಘಟನೆ ಮಾಡಲು ಮುಂದಾಗಿದ್ದೆ. ಇದು ಖುಶಿಯ ವಿಚಾರ ಇನ್ನು ಮುಂದೆಯೂ ಕೂಡಾ ನಾವು ಒಗ್ಗಟ್ಟಲ್ಲಿ ನಾವು ಇದ್ದು ನಾವು ನಮ್ಮ ಸಮಾಜ ಬೇಳೆಸುವ ಕೆಲಸ ಮಾಡಬೇಕಿದೆ ಎಂದರು.. ಪ್ರಸ್ತಾವನೆಯನ್ನು ಗೋಪಾಲ್ ಹಾರೆಗೊಪ್ಪ .ನಿರೂಪಣೆ ಮತ್ತು ವಂದನಾರ್ಪಣೆ ಯನ್ನು ಸುರೇಶ್ ಕೆ.ಆರ್.ಮಾಡಿದರು..

# ರಶ್ಮಿಕಾಗೆ ಹೆಚ್ಚಾಯ್ತು ಡಿಮ್ಯಾಂಡ್...!



ನ್ಯಾಶನಲ್ ಕ್ರಶ್ ಎಂದೇ ಹೆಸರಾಗಿರುವ ರಶ್ಮಿಕಾ ಮಂದಣ್ಣ, ಕಿರೀಕ್ ಪಾರ್ಟಿ ಸಿನಿಮಾದ ಮೂಲಕ ಸಿನಿಮಾಗೆ ಎಂಟ್ರಿ ಕೊಟ್ಟಿದ್ದರು. ಏನ್ ಲಕ್ ಇತ್ತೋ ಏನೋ ರಶ್ಮಿಕಾರ ಮೊದಲ ಸಿನಿಮಾನೇ ಹಿಟ್ ಆಗಿತ್ತು. ಅಲ್ಲೇ ನೋಡಿ ರಶ್ಮಿಕಾ ಹಣೆ ಬರಹ ಬದಲಾಗಿದ್ದು.

ಕಿರೀಕ್ ಪಾರ್ಟಿ ಹಿಟ್ ಆಗುತ್ತಿದ್ದಂತೆ ರಶ್ಮಿಕಾಗೆ ಸಿನಿಮಾ ಪ್ರಾಜೆಕ್ಟ್‌ಗಳ ಸುರಿ ಮಳೆಯೇ ಸುರಿದಿತ್ತು. ಸ್ಯಾಂಡಲ್‌ವುಡ್ ಅಷ್ಟೇ ಅಲ್ಲ, ಟಾಲಿವುಡ್, ಕಾಲಿವುಡ್ ಅಂತ ಸಿನಿಮಾಗಳಲ್ಲಿ ಚ್ಯಾನ್ಸ್ ಗಿಟ್ಟಿಸಿಕೊಂಡ ರಶ್ಮಿಕಾ. ಬಾಲಿವುಡ್‌ನಲ್ಲೂ ಅವಕಾಶ ಗಿಟ್ಟಿಸಿಕೊಂಡಿದ್ದಾರೆ. ಇತ್ತೀಚೆಗೆ ಬಾಲಿವುಡ್ ಬಿಗ್ಗಿ ಸಲ್ಮಾನ್ ಖಾನ್ ಜೊತೆ ಸಿನಿಮಾ ಮಾಡಲು ಸಿಗ್ನೇಚರ್ ಹಾಕಿದ್ದಾರೆ. ಇಷ್ಟೆಲ್ಲಾ ಆಫರ್ಸ್ ಪಡಿತಾ ಇರೋ ರಶ್ಮಿಕಾ ಸಂಭಾವನೆ ಎಷ್ಟು ಗೊತ್ತಾ? ಸಾಲು ಸಾಲು ಸಿನಿಮಾಗಳ ಮೂಲಕ ಸದ್ದು ಮಾಡತ್ತಿರುವ ರಶ್ಮಿಕಾ ಸ್ಟಾರ್ ನಟಿಯರನ್ನ ಹಿಂದಿಕಿದ್ದಾರೆ. ಸೌತ್ ಫಿಲಿಂ ಇಂಡಸ್ಟ್ರಿಯಲ್ಲಿ ನಯನ್‌ತಾರಾ ಹಾಗೂ ತ್ರಿಷಾ ಅತೀಹೆಚ್ಚು ಸಂಬಭಾವನೆ ಪಡೆಯುವ ನಟಿಯರು ಎಂದು ಗುರುತಿಸಿಕೊಂಡಿದ್ದಾರೆ. ಆದರೆ ಈ ಇಬ್ಬರೂ ನಟಿಯರನ್ನ ರಶ್ಮಿಕಾ ಹಿಂದಿಕ್ಕಿದ್ದಾರೆ. ಹಲವು ವರ್ಷಗಳಿಂದ ಸಿನಿಮಾಗಳಲ್ಲಿ ಸ್ಟಾರ್ ನಟಿಯರಾಗಿ ಮಿಂಚುತ್ತಿರುವ ನಯನ್ ಹಾಗೂ ತ್ರಿಶಾ ಒಂದು ಚಿತ್ರಕ್ಕೆ 12 ಕೋಟಿಯವೆಗೂ ಸಂಭಾವನೆ ಪಡೆಯುತ್ತಾರೆ.ಆದರೆ ಇವರನ್ನೂ ಬೀಟ್ ಮಾಡಿದ ರಶ್ಮಿಕಾ, ಇತ್ತೀಚೆಗೆ ಸೈನ್ ಹಾಕಿರುವ ಸಿಖಂದರ್ ಸಿನಿಮಾಗೆ ಬರೋಬ್ಬರಿ 15 ಕೋಟಿ ಸಂಭಾವನೆ ಕೇಳಿದ್ದಾರೆ ಎನ್ನುವ ಸುದ್ದಿ ಕೇಳಿ ಬಂದಿದೆ.ಆದರೆ ನಟಿಯ ಜೊತೆ ಮಾತುಕತೆ ನಡೆಸಿ ಚಿತ್ರ ತಂಡ 13 ಕೋಟಿ ಕೊಡುವುದಾಗಿ ಒಪ್ಪಿಕಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

Printed by : H.L.AMARANATH, Owned by: H.L.AMARANATH, Printed at : SREE MANJUNATHA ENTERPRISES No. 7, Tirugappa lane, Cottonpet cross, Cottonpet, Bangalore-560053.
Published at : No.97, 2nd Cross, Vivekanandanagar, Khadi Commission Layout, BSK 3rd Stage, Kathariguppe Main Road, Bengaluru-560085. Mobile: 9663122276 Editor : H.L.AMARANATH